# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 68 (143)

**ಸದಸ್ಯರ ಹೆಸರು** : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : ದಿನಾಂಕ:01-02-2021

**ಉತ್ತರಿಸುವ ಸಚಿವರು** : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಸಹ ಶಿಕ್ಷಕರ (1 ರಿಂದ 5ನೇ ತರಗತಿ ಬೋಧಿಸುವವರು) ಸಂಖ್ಯೆ ಎಷ್ಟು; | ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಸಹ ಶಿಕ್ಷಕರ (1 ರಿಂದ 5ನೇ ತರಗತಿ ಬೋಧಿಸುವವರು) ಸಂಖ್ಯೆ : 1,26,063 |
| ಆ. | ಮೇಲ್ಕಂಡ ಶಿಕ್ಷಕರಲ್ಲಿ ಪದವೀಧರ ಶಿಕ್ಷಕರ ಸಂಖ್ಯೆ ಎಷ್ಟು; | ಪದವೀಧರ ಶಿಕ್ಷಕರ ಸಂಖ್ಯೆ: 21,282 |
| ಇ. | ಪದವೀಧರ ಪ್ರಾಥಮಿಕ ಪದವಿ ಶಿಕ್ಷಕರನ್ನು 6 ಮತ್ತು 7ನೇ ತರಗತಿಗೆ ಬೋಧಿಸಲು ಖಾಲಿ ಇರುವ ಹುದ್ದೆಗಳಿಗೆ ವಿಲೀನ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? (ಮಾಹಿತಿ ನೀಡುವುದು) | ಇಲ್ಲ, <br> ಆದರೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 626 ಪಿಬಿಎಸ್ 2014 ದಿನಾಂಕ:07-08-2017ರ ಪ್ರಕಾರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರ (6 ರಿಂದ 8ನೇ ತರಗತಿಗಳ) ಹುದ್ದೆಗಳ ನೇಮಕಾತಿಯಲ್ಲಿ ನಿಯಮಗಳಂತೆ 1 ರಿಂದ 5ನೇ ತರಗತಿಗಳ ವೃಂದದಿಂದ ಪದವೀಧರ ಪ್ರಾಥಮಿಕ ಶಿಕ್ಷಕರ 6 ರಿಂದ 8ನೇ ತರಗತಿಗಳು ವೃಂದಕ್ಕೆ ಸೇವಾ ನಿರತರ ಕೋಟಾದಡಿ ಪರೀಕ್ಷೆ ಮುಖಾಂತರ "ಸೇವಾ ನಿರತರ ನೇಮಕಾತಿಗೆ" ಅವಕಾಶ ಇರುತ್ತದೆ. <br><br> ಹಾಗೆಯೇ, ನೇರ ನೇಮಕಾತಿ ಹಾಗೂ ಸೇವಾ ನಿರತರ ಶೇ 75:25 ಪ್ರಮಾಣ ನಿಗದಿ ಇದೆ. ಮತ್ತು ಪರೀಕ್ಷೆ ಮುಖಾಂತರ ಮಾತ್ರ ಸೇವಾ ನಿರತರಿಗೆ ನೇಮಕಾತಿಗೆ ಅವಕಾಶವಿದೆ. <br><br> ಈ ವಿಷಯದಲ್ಲಿ, ರಾಜ್ಯ ಪ್ರಾಥಮಿಕ ಶಾಲಾ |
| | | ಶಿಕ್ಷಕರ ಸಂಘದಿಂದ, ಪದವೀಧರ ಪ್ರಾಥಮಿಕ ಶಿಕ್ಷಕರ (6 ರಿಂದ 8ನೇ ತರಗತಿಗಳು) ವೃಂದಕ್ಕೆ |

| | | |
|---|---|---|
| | | ಸೇವಾ ನಿರತ ಕೋಟಾದಡಿ ಪರೀಕ್ಷೆ ಮುಖಾಂತರ ಇರುವುದನ್ನು ಬದಲಾವಣೆ ಮಾಡುವುದರ ಜೊತೆಗೆ ಬಡ್ತಿ ಪ್ರಮಾಣ 25 ರಿಂದ ಶೇ 50 ಕ್ಕೆ ಹೆಚ್ಚಿಸಲು ಕೋರಿಕೆಗಳು ಸ್ವೀಕೃತವಾಗಿದ್ದು, ತಿದ್ದುಪಡಿ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಇಪಿ 2 ಪಿಎಂಎ 2020

**(ಎಸ್. ಸುರೇಶ್‌ಕುಮಾರ್)**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಹಾಗೂ ಸಕಾಲ ಸಚಿವರು